SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar

UNIVERSITY LIBRARY & LEARNING RESOURCE CENTRE

Online Newspaper Clipping Service
ಕೋಲಾರಪತ್ರಿಕೆ
Dtd-Saturday, 13, May 2023

Page No.04

# ದೇವರಾಜ ಅರಸು ನರ್ಸಿಂಗ್ ಕಾಲೇಜಿನಲ್ಲಿ ಶುಶ್ರೂಕರ ದಿನಾಚರಣೆ
## ರೋಗಿಗೆ ಆತ್ಮವಿಶ್ವಾಸ ತುಂಬುವ ಶ್ಲಾಘನೀಯ ಕಾರ್ಯ-ಚಂದ್ರಶೇಖರಶೆಟ್ಟಿ



ಕೋಲಾರ:- ರೋಗಿಯಲ್ಲಿ ಬದುಕುವ ಆತ್ಮವಿಶ್ವಾಸ ವೃದ್ದಿಸಿ ಅವರ ಕಾಯಿಲೆ ಗುಣಮುಖವಾಗಲು ಸೇವಾ ಮನೋಭಾವದಿಂದ ದುಡಿಯುವ ಶುಶ್ರೂಕಿಯರ ಕಾರ್ಯ ಶ್ಲಾಘನೀಯವಾದುದು ಎಂದು ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಸಲಹೆಗಾರ ಟಿ.ಚಂದ್ರಶೇಖರಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ಆರ್ ಎಲ್ ಜಾಲಪ್ಪ ಆಸ್ಪತ್ರೆ ಮತ್ತು ಶ್ರೀ ದೇವರಾಜ್ ಅರಸ್ ನರ್ಸಿಂಗ್ ಕಾಲೇಜು ವತಿಯಿಂದ ನಡೆದ ಅಂತರಾಷ್ಟ್ರೀಯ ಶುಶ್ರೂಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಶುಶ್ರೂಕರು ದಶಾ ಆಜ್ಞೆಯನ್ನು ತಮ್ಮ ವೃತಿಯಲ್ಲಿ ಚಾಚುತಪ್ಪದೆ ಅಳವಡಿಸಿಕೊಳ್ಳಬೇಕೆಂದು ಕಿವಿ ಮಾತು ಹೇಳಿದ ಅವರು, ಇದು ಮಾನವೀಯ ನೆಲಗಟ್ಟಿನಲ್ಲಿ ಮಾಡುವ ಅತ್ಯಂತ ಪವಿತ್ರವಾದ ಸೇವೆಯಾಗಿದ್ದು, ಸಾವಿನಂಚಿನಲ್ಲಿರುವ ರೋಗಿ ಗುಣಮುಖನಾದರೆ ಶುಶ್ರೂಕಿಯರನ್ನು ದೇವರಂತೆ ಕಾಣುತ್ತಾನೆ ಎಂದರು.

ವೈದ್ಯರು ಚಿಕಿತ್ಸೆಗೆ ಮಾರ್ಗದರ್ಶನ ನೀಡಿದರೂ, ಚಿಕಿತ್ಸೆಯನ್ನು ಸಮರ್ಪಕವಾಗಿ ರೋಗಿಗೆ ತಲುಪಿಸುವ ಪ್ರಮುಖ ಹೊಣೆ ಹೊತ್ತಿರುವ ನರ್ಸಿಂಗ್ ಸಿಬ್ಬಂದಿ ರೋಗ ಗುಣಮುಖವಾಗುವಲ್ಲಿ ವೈದ್ಯರಷ್ಟೇ ಪ್ರಾಮುಖ್ಯತೆ ಗಳಿಸಿರುತ್ತಾರೆ ಎಂದರು.

ಶುಶ್ರೂಕಿಯರ ವೃತ್ತಿಯಲ್ಲಿ ರೋಗಿಯ ಕುರಿತು ಅಸಡ್ಡೆ ತೋರದೇ ವೃತ್ತಿ ಗೌರವ ಉಳಿಸಿಕೊಂಡು ಹೋಗುವ ಮೂಲಕ ಸಮಾಜಕ್ಕೆ ಕೊಡುಗೆ ನೀಡಿ, ಎಂದ ಅವರು, ಕೋವಿಡ್ ಸಂದರ್ಭದಲ್ಲಿ ಶುಶ್ರೂಕಿಯರು ಮಾಡಿದ ಸೇವೆ ಸ್ಮರಣೀಯ ಎಂದರು.

ನರ್ಸಿಂಗ್ ಅಧಿಕಾರಿ ಡಾ.ಜೀನತ್, ಆರ್ ಎಲ್ ಜಾಲಪ್ಪ ಆಸ್ಪತ್ರೆ ಮತ್ತು ಶ್ರೀ ದೇವರಾಜ್ ಅರಸ್ ನರ್ಸಿಂಗ್ ಕಾಲೇಜಿನಲ್ಲಿ ನಡೆಸಿದ ನರ್ಸ್‌ಡೇ ಅಂಗವಾಗಿ ಒಂದು ವಾರ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿದ ಕುರಿತು ವರದಿ ಮಂಡಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿಧ್ಯಾರ್ಥಿಗಳಿಗೆ ಹಾಗೂ ನಿವೃತ್ತಿ ಹೊಂದಿದ ನರ್ಸ್ ತಿಮೋರ ನಿಸ್ವಾರ್ಥ ಸೇವೆಯನ್ನು ಶ್ಲಾಘಿಸಿ ಸನ್ಮಾನಿಸಲಾಯಿತು.

ಎರಡೂ ಸಂಸ್ಥೆಯಲ್ಲಿ 10 ವರ್ಷ ಹಾಗೂ 25 ವರ್ಷಗಳು ಈ ಆಸ್ಪತ್ರೆಯಲ್ಲಿ ನಿಸ್ವಾರ್ಥ ಸೇವೆಸಲ್ಲಿಸಿರುವ ನರ್ಸ್‌ಗಳನ್ನು ಸತ್ಕರಿಸಿ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು.

ನರ್ಸಿಂಗ್ ಕಾಲೇಜಿನ ಉಪ ಪ್ರಾಂಶುಪಾಲ ಡಾ:ಲಾವಣ್ಯಸುಭಾಷಿನಿ, ಅಂತರಾಷ್ಟ್ರೀಯ ನರ್ಸ್‌ಗಳ ದಿನಾಚರಣೆಯ ಸಂದರ್ಭದಲ್ಲಿ ಸೇವಾ ನಿರತ ದಾದಿಯರ ಭವಿಷ್ಯದ ಕುರಿತು ಮಾತನಾಡಿ, ದಾಧಿಯರ ಸೇವೆಗೆ ಮತ್ತಷ್ಟು ಸೌಲಭ್ಯಗಳು ಸಿಗಬೇಕು ಎಂದರು.

ಸಂಸ್ಥೆಯ ಕಾರ್ಯದರ್ಶಿ ಹನುಮಂತರಾಜು, ಹಿರಿಯ ಸಲಹೆಗಾರ ಹನುಮಂತರಾವ್, ಅಡ್ವೇಸರ್, ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಪ್ರಭಾಕರ್, ವೈದ್ಯಕೀಯ ಅಧೀಕ್ಷಕ ಡಾ. ಜೆ. ಕೃಷ್ಣಪ್ಪ, ಟ್ರಸ್ಟಿ ನಳಿಸಿ ಇತರರು ಭಾಗವಹಿಸಿದ್ದರು.

ಪ್ರಜಾವಾಣಿ



## ಅರಸು ನರ್ಸಿಂಗ್ ಕಾಲೇಜಿನಲ್ಲಿ ದಿನಾಚರಣೆ

# ಶುಶ್ರೂಷಕಿಯರ ಸೇವೆ ಶ್ಲಾಘನೀಯ

ಪ್ರಜಾವಾಣಿ ವಾರ್ತೆ

ಕೋಲಾರ: 'ರೋಗಿಯಲ್ಲಿ ಬದುಕುವ ಆತ್ಮವಿಶ್ವಾಸ ವೃದ್ಧಿಸಿ ಅವರ ಕಾಯಿಲೆ ಗುಣಮುಖವಾಗಲು ಸೇವಾ ಮನೋಭಾವದಿಂದ ದುಡಿಯುವ ಶುಶ್ರೂಷಕಿಯರ ಕಾರ್ಯ ಶ್ಲಾಘನೀಯ' ಎಂದು ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಸಲಹೆಗಾರ ಟಿ.ಚಂದ್ರಶೇಖರ ಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ಆರ್.ಎಲ್.ಜಾಲಪ್ಪ ಆಸ್ಪತ್ರೆ ಮತ್ತು ದೇವರಾಜ ಅರಸು ನರ್ಸಿಂಗ್ ಕಾಲೇಜು ಆಶ್ರಯದಲ್ಲಿ ಶುಕ್ರವಾರ ನಡೆದ ಅಂತರರಾಷ್ಟ್ರೀಯ ಶುಶ್ರೂಕಿಯರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

'ಮಾನವೀಯ ನೆಲೆಗಟ್ಟಿನಲ್ಲಿ ಮಾಡುವ ಅತ್ಯಂತ ಪವಿತ್ರವಾದ ಸೇವೆಯಾಗಿದ್ದು, ಸಾವಿನಂಚಿನಲ್ಲಿರುವ ರೋಗಿ ಗುಣಮುಖನಾದರೆ ಶುಶ್ರೂಷಕಿಯರನ್ನು ದೇವರಂತೆ ಕಾಣುತ್ತಾನೆ' ಎಂದರು.

'ವೈದ್ಯರು ಚಿಕಿತ್ಸೆಗೆ ಮಾರ್ಗದರ್ಶನ ನೀಡಿದರೂ, ಚಿಕಿತ್ಸೆಯನ್ನು ಸಮರ್ಪಕವಾಗಿ ರೋಗಿಗೆ ತಲುಪಿಸುವ ಪ್ರಮುಖ ಹೊಣೆ ಹೊತ್ತಿರುವ ನರ್ಸಿಂಗ್ ಸಿಬ್ಬಂದಿ ರೋಗ ಗುಣಮುಖವಾಗುವಲ್ಲಿ ವೈದ್ಯರಷ್ಟೇ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಶುಶ್ರೂಕಿಯರು ಸೇವೆ ಸ್ಮರಣೀಯ' ಎಂದು ಶ್ಲಾಘಿಸಿದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಹಾಗೂ ನಿವೃತ್ತಿ ಹೊಂದಿದ ನರ್ಸ್ ತಿಮೋರ ನಿಸ್ವಾರ್ಥ ಸೇವೆ ಶ್ಲಾಘಿಸಿ ಸನ್ಮಾನಿಸಲಾಯಿತು. ಎರಡೂ ಸಂಸ್ಥೆಯಲ್ಲಿ 10 ವರ್ಷ ಹಾಗೂ 25 ವರ್ಷ ಸೇವೆ ಸಲ್ಲಿಸಿರುವ ನರ್ಸ್‌ಗಳನ್ನು ಸತ್ಕರಿಸಿ, ಪ್ರಮಾಣ ಪತ್ರ ವಿತರಿಸಲಾಯಿತು.

ನರ್ಸಿಂಗ್ ಕಾಲೇಜಿನ ಉಪ ಪ್ರಾಂಶುಪಾಲ ಡಾ.ಲಾವಣ್ಯ ಸುಭಾಷಿನಿ, ಅಂತರರಾಷ್ಟ್ರೀಯ ನರ್ಸ್‌ಗಳ ದಿನಾಚರಣೆಯ ಸಂದರ್ಭದಲ್ಲಿ ಸೇವಾ ನಿರತ ದಾದಿಯರ ಭವಿಷ್ಯದ ಕುರಿತು ಮಾತನಾಡಿದರು.

ಸಂಸ್ಥೆಯ ಕಾರ್ಯದರ್ಶಿ ಹನುಮಂತರಾಜು, ಸಲಹೆಗಾರ ಹನುಮಂತರಾವ್, ದೇವರಾಜ ಅರಸು ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಪ್ರಭಾಕರ್, ವೈದ್ಯಕೀಯ ಅಧೀಕ್ಷಕ ಡಾ.ಜೆ.ಕೃಷ್ಣಪ್ಪ, ಟ್ರಸ್ಟಿ ನಳಿಸಿ ಇದ್ದರು.



ಕೋಲಾರ ನಗರದ ಆರ್.ಎಲ್.ಜಾಲಪ್ಪ ಆಸ್ಪತ್ರೆ ಮತ್ತು ದೇವರಾಜ ಅರಸು ನರ್ಸಿಂಗ್ ಕಾಲೇಜು ಆಶ್ರಯದಲ್ಲಿ ಶುಕ್ರವಾರ ಅಂತರರಾಷ್ಟ್ರೀಯ ನರ್ಸ್‌ಗಳ ದಿನಾಚರಣೆ ಆಚರಿಸಲಾಯಿತು